**OS 07/2021**

**<u>ಪಿಡಬ್ಲ್ಯೂ: 1</u>**

**<u>ದಿಃ 10-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲುಃ ಶ್ರೀ. ಎಂ ಟಿ ಎಸ್ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದಃ</u>**

ನಾನು ಪಿಯುಸಿವರೆಗೆ ವ್ಯಾಸಂಗ ಮಾಡಿದ್ದೇನೆ. 5 ಮತ್ತು 7 ನೇ ಪ್ರತಿವಾದಿಗಳು ಸಲ್ಲಿಸಿದ ಕೌಂಟರ್ ಕ್ಲೇಮ್ ಸಂಗತಿಗಳನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ನ್ಯಾಯಾಲಯದಲ್ಲಿ ರಾಜಿ ಮೂಲಕ ಮಾಡಿಕೊಂಡ ವಿಭಾಗದ ನಂತರ ನನ್ನ ತಂದೆ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಕೊಂಡಿರಬಹುದು. ಹಾಗೆ ಕಂದಾಯ ದಾಖಲೆಗಳನ್ನು ಬದಲಾವಣೆ ಮಾಡಿಕೊಳ್ಳಲು ನನ್ನ ತಂದೆ ಚನ್ನಗಿರಿ ಅಥವಾ ಸಂತೆಬೆನ್ನೂರು ಕಛೇರಿಗಳಿಗೆ ಬಂದಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ತನ್ನ 80-85 ನೇ ವಯಸ್ಸಿನಲ್ಲಿ ವ್ಯವಸಾಯ ಮಾಡುವುದನ್ನು ಬಿಟ್ಟಿದ್ದರು. ನಂತರ ನಾನು ನನ್ನ ತಂದೆಯ ಆಸ್ತಿಗಳನ್ನು ವ್ಯವಸಾಯ ಮಾಡುತ್ತಿದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದ ಜಮೀನುಗಳಿಗೆ ಕಂದಾಯವನ್ನು ನನ್ನ ತಂದೆ ಕಟ್ಟುತ್ತಿದ್ದರು. ನನ್ನ ತಂದೆ ಮರಣ ಹೊಂದುವ ಕಾಲಕ್ಕೆ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ. ನನ್ನ ತಂದೆ ಮತ್ತು ನಮ್ಮಗಳ ಮಧ್ಯೆ ನ್ಯಾಯಾಲಯದಲ್ಲಿ ಆಸ್ತಿಗಳು ವಿಭಾಗ ಆದ ನಂತರ ನನ್ನ ಮೂರು ಜನ ಸಹೋದರಿಯರು ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. 5 ನೇ ಪ್ರತಿವಾದಿ ನಮ್ಮ ಮನೆಗೆ ಕೊನೆಯದಾಗಿ 2020 ರಲ್ಲಿ ಭೇಟಿ ನೀಡಿದ್ದರು. ಆಗ 5 ನೇ ಪ್ರತಿವಾದಿ ನಮ್ಮ ಮನೆಗೆ ಆಸ್ತಿಯಲ್ಲಿ ಪಾಲು ನೀಡಬೇಕೆಂದು ಕೇಳಲು ಬಂದಿದ್ದರು. ಆ ಕಾಲಕ್ಕೆ ನನ್ನ ತಂದೆ ಮರಣ ಹೊಂದಿದ್ದರು. 5 ನೇ ಪ್ರತಿವಾದಿ ನನ್ನ ತಂದೆಗೆ ಬಂದ ಆಸ್ತಿಗಳ ವಿಭಾಗದಲ್ಲಿ ತನಗೆ ಭಾಗ ನೀಡಬೇಕೆಂದು ಕೇಳಲು ಬಂದಿದ್ದರು. ನನ್ನ ತಂದೆಗೆ ವಿಭಾಗದಲ್ಲಿ ಬಂದ ಆಸ್ತಿಗಳನ್ನು ವಿಲೇವಾರಿ ಮಾಡುವ ಬಗ್ಗೆ ನನ್ನ ತಂದೆ ಅವರ ಮಕ್ಕಳೊಂದಿಗೆ ಯಾವ ಕಾಲಕ್ಕೂ ಚರ್ಚೆ ಮಾಡಿಲ್ಲ.

ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಅವರ ಪಾಲಿಗೆ ಬಂದ ಆಸ್ತಿಗಳ ದಾಖಲೆಗಳನ್ನು ಕಂದಾಯ ಇಲಾಖೆಯಿಂದ ಪಡೆದುಕೊಂಡಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಅನಕ್ಷರಸ್ಥರು ಎಂದರೆ ಸರಿ. ನನ್ನ ತಂದೆ ಕಂದಾಯ ದಾಖಲೆಗಳನ್ನು ಸ್ವಂತಕ್ಕೆ ಪಡೆದುಕೊಳ್ಳಲು ಆಗುತ್ತಿರಲಿಲ್ಲ ಮತ್ತು ಅದಕ್ಕೆ ಬೇರೆಯವರ ಸಹಾಯ ಪಡೆದಕೊಳ್ಳುತ್ತಿದ್ದರು ಎಂದರೆ ಸರಿ. 5 ಮತ್ತು 7 ನೇ ಪ್ರತಿವಾದಿಗಳು ಸಲ್ಲಿಸಿದ ಕೌಂಟರ್

ಕ್ಲೇಮನಲ್ಲಿ ಕಾಣಿಸಿದ ಆಸ್ತಿಗಳ ಕುರಿತು ನನ್ನ ತಂದೆ ಮೊದಲ ಬಾರಿಗೆ 01-10-2018 ರಂದು ಮರಣ ಶಾಸನ ಪತ್ರ ದಾಖಲೆ ಬರೆದಿದ್ದರು. ಅದೇ ದಿನ ಅಂದರೆ 01-10-2018 ರಂದು ವಾದಿಯ ಹೆಸರಿಗೆ ನನ್ನ ತಂದೆ ದಾನ ಪತ್ರ ಬರೆದಿದ್ದರು. 01-10-2018 ರಂದು ನನ್ನ ತಂದೆ ಬರೆದ ಮರಣ  ಶಾಸನದ ಪ್ರಕಾರ ವಾದಿಗೆ ಸ.ನಂ.200/4 ರಲ್ಲಿ 2 ಗುಂಟೆ, ಸ.ನಂ.86/13 ರಲ್ಲಿ 31 ಗುಂಟೆ, ಖಾತೆ ನಂ. 175 ರಲ್ಲಿ ಒಂದು ಮನೆ ಆಸ್ತಿಗಳನ್ನು ಬರೆದಿದ್ದರು. ಸ.ನಂ.15/3 ರಲ್ಲಿ 10.5 ಗುಂಟೆ ಜಮೀನನ್ನು 01-10-2018 ರ ಮರಣ ಶಾಸನ ಪತ್ರದ ಮೂಲಕ ವಾದಿಗೆ ಬರೆಯಲಾದ ಆಸ್ತಿ ಎಂದರೆ ಸರಿಯಲ್ಲ. 01-10-2018 ರ ಮರಣ ಶಾಸನ ಪತ್ರದ ಹೊರತಾಗಿ ಬೇರೆ ಮರಣ ಶಾಸನ ಪತ್ರ ಬರೆದ ಬಗ್ಗೆ ನನಗೆ ಗೊತ್ತಿಲ್ಲ. 01-10-2018 ರಂದು ನನ್ನ ತಂದೆ ಮರಣ ಶಾಸನ ಪತ್ರ ಬರೆಯಲು ಚನ್ನಗಿರಿಗೆ ನನ್ನ ತಂದೆಯನ್ನು ಯಾರು ಕರೆದುಕೊಂಡು ಬಂದಿದ್ದರು ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಗೆ 01-10-2018 ರ ಮರಣ ಶಾಸನ ಪತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ದಾಖಲೆ ತನಗೆ ಸಿಗದೆ ಇದ್ದ ಕಾರಣ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸ.ನಂ.62/7 28.5 ಗುಂಟೆ, ಸ.ನಂ. 62/8 ರಲ್ಲಿ 25.5 ಗುಂಟೆ ಆಸ್ತಿಗಳು ನಮ್ಮ ತಂದೆಯ ಮರಣ ನಂತರ ಯಾರ ಹೆಸರಿಗೆ ವರ್ಗಾವಣೆಯಾಗಿವೆ ಎಂದರೆ ಸಾಕ್ಷಿ ಈಗಲೂ ನಮ್ಮ ತಂದೆಯ ಹೆಸರಿನಲ್ಲಿ ಇವೆ ಎಂದು ನುಡಿಯುತ್ತಾರೆ. 01-10-2018 ರ ಮರಣ ಶಾಸನ ಪತ್ರ ನನ್ನ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಂದೆ ದಾನ ಪತ್ರವನ್ನು ವಾದಿ ನನ್ನ ಮಗನ ಹೆಸರಿಗೆ ಬರೆದಿದ್ದಾರೆ. ಸದರಿ ದಾನ ಪತ್ರದ ಪ್ರಕಾರ ವಾದಿಗೆ ಸ.ನಂ.15/3 ರಲ್ಲಿ 10.5 ಗುಂಟೆ, ಸ.ನಂ.136/5 ರಲ್ಲಿ 19.04 ಗುಂಟೆ ಬಂದಿದೆ ಎಂದು ನುಡಿಯುತ್ತಾರೆ. 01-10-2018 ರಂದು ನನ್ನ ತಂದೆ ದಾನ ಪತ್ರದ ಮೂಲಕ ನೀಡಿದ ಆಸ್ತಿಗಳನ್ನು ಪಡೆದುಕೊಳ್ಳಲು ವಾದಿಯ ಪರವಾಗಿ ಯಾರು ಬಂದಿರಲಿಲ್ಲ. ಜ್ಯೋತಿ ನನ್ನ  ಹೆಂಡತಿ. 01-10-2018 ರಂದು ನನ್ನ ತಂದೆ ದಾನ ಪತ್ರ ಬರೆಯುವ ಕಾಲಕ್ಕೆ ನನ್ನ ತಂದೆಯೊಂದಿಗೆ ನಾನಗಲಿ ನನ್ನ ಹೆಂಡತಿಯಾಗಲಿ ಹೋಗಿರಲಿಲ್ಲ ಮತ್ತು ಯಾರು ಹೋಗಿದ್ದರು ನನಗೆ ಗೊತ್ತಿಲ್ಲ. ಆ ಕಾರಣ ಆ ದಿನ ದಾನದ ಆಸ್ತಿಗಳನ್ನು ಯಾರು ಸ್ವೀಕಾರ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಪಿಡಬ್ಲ್ಯೂ: 1**

ದಿಃ 07-06-2015 ರಂದು ಒಂದು ಮರಣ ಶಾಸನ ಪತ್ರ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.15/3 ರಲ್ಲಿ 10.5 ಗುಂಟೆ, ಸ.ನಂ.86/5 ರಲ್ಲಿ 1 ಎಕರೆ 21 ಗುಂಟೆ, ಸಂ. ನಂ.86/9 ರಲ್ಲಿ 31 ಗುಂಟೆ, ಸ.ನಂ.136/5 ರಲ್ಲಿ 19.04 ಗುಂಟೆ ನನ್ನ ತಂದೆಯ ಹೆಸರಿಗೆ ಇದ್ದ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳ ಬಗ್ಗೆ ನನ್ನ ತಂದೆ 01-10-2018 ರಂದು ಒಂದು ಮರಣ ಶಾಸನ ಮತ್ತು 07-01-2019 ರಂದು ಮತ್ತೊಂದು ಮರಣ ಶಾಸನ ಪತ್ರವನ್ನು ಬರೆದಿದ್ದಾರೆ. ಸದರಿ ಎರಡು ಮರಣ ಶಾಸನ ಪತ್ರಗಳನ್ನು ಬಿಟ್ಟು ನನ್ನ ತಂದೆ ಬೇರೆ ಮರಣ ಶಾಸನ ದಾಖಲೆ ಬರೆದಿಲ್ಲ. 2018-19 ರಲ್ಲಿ ನನ್ನ ತಂದೆಗೆ ಸುಮಾರು 90 ವರ್ಷ ಆಸುಪಾಸು ಇರಬಹುದು. ಈ ಮುಂಚೆ ನನ್ನ ತಂದೆ ವ್ಯವಸಾಯ ಮತ್ತು ತಿಂಡಿ ಅಂಗಡಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ತಿಂಡಿ ವ್ಯಾಪಾರ ಬಿಟ್ಟು ಸುಮಾರು 15-20 ವರ್ಷಗಳ ಹಿಂದೆಯೇ ಬಿಟ್ಟಿದ್ದರು. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ತಿಂಡಿ ಅಂಗಡಿ ವ್ಯಾಪಾರ ಮಾಡಲು ಆಗುವುದಿಲ್ಲ ಎಂಬ ಕಾರಣ ಬಿಟ್ಟಿದ್ದರು ಎಂದರೆ ಸಾಕ್ಷಿ ತಾನೆ ಬಿಡಿಸಿರುವುದಾಗಿ ನುಡಿಯುತ್ತಾರೆ. ನನ್ನ ಮಾಹಿತಿಗೆ ಇದ್ದಂತೆ ನನ್ನ ತಂದೆಗೆ ಚನ್ನಗಿರಿಯಲ್ಲಿ ಸತೀಶ್ ಎಂಬುವವರ ಪರಿಚಯ ಇತ್ತು. ಎರಡು ಮರಣ ಶಾಸನ ಪತ್ರಗಳು ಮತ್ತು ಒಂದು ದಾನ ಪತ್ರಕ್ಕೆ ಸತೀಶ್ ರವರ ಸಹಿ ಇದೆ. ಸದರಿ ಸತೀಶ್ ಎಂಬ ವ್ಯಕ್ತಿಗೆ ನನ್ನ ತಂದೆಗೆ ಪರಿಚಯ ಇದ್ದಿರಲಿಲ್ಲ ಎಂದರೆ ಸರಿಯಲ್ಲ.

2001 ರಿಂದ ನನ್ನ ತಂದೆ ನ್ಯಾಯಾಲಯದ ಪ್ರಕರಣಕ್ಕಾಗಿ 2-3 ಸಾರಿ ನ್ಯಾಯಾಲಯಕ್ಕೆ ಬಂದು ಹೋಗಿ ಮಾಡಿದ್ದಾರೆ. 2001 ರಲ್ಲಿ ನನ್ನ ತಮ್ಮ ವಿಭಾಗ ಕೋರಿ ದಾಖಲಿಸಿದ್ದ ಪ್ರಕರಣದಲ್ಲಿ ನಾನು ನನ್ನ ತಂದೆ ಸೇರಿ ಪ್ರತಿವಾದ ಪತ್ರ ಸಲ್ಲಿಸಿದ್ದು ಮತ್ತು ಸದರಿ ಪ್ರತಿವಾದ ಪತ್ರಕ್ಕೆ ನನ್ನ ತಂದೆಯ ಪರವಾಗಿ ನಾನೇ ಸಹಿ ಮಾಡಿದ್ದೆ ಎಂದರೆ ಸರಿ. ಆ ಪ್ರಕರಣದಲ್ಲಿಯ ಆಸ್ತಿಗಳ ಮಾಹಿತಿಯನ್ನು ನಾನು ನನ್ನ ತಂದೆಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಆಸ್ತಿ ವಿಭಾಗ ಆದ ನಂತರವೂ ಸಹ ನನ್ನ ತಂದೆಗೆ ತನಗೆ ಯಾವ ಯಾವ ಆಸ್ತಿಗಳು ಬಂದಿವೆ ಎಂದು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನನ್ನ ತಂದೆಯ ಮೌಢ್ಯತೆಯ ದುರುಪಯೋಗಪಡಿಸಿಕೊಂಡು ನಾನು, ನನ್ನ ಹೆಂಡತಿ, ನನ್ನ ಮಗ ವಾದಿ ಮತ್ತು ನನ್ನ ಸಹೋದರ 6 ನೇ ಪ್ರತಿವಾದಿ ಎಲ್ಲರೂ ಸೇರಿ ನನ್ನ ತಂದೆಯನ್ನು ಚನ್ನಗಿರಿಗೆ ಕರೆದುಕೊಂಡು ಬಂದು ಅವರಿಗೆ ದಾಖಲೆಗಳ ಮಾಹಿತಿ ನೀಡದೆ

ದಾಖಲೆಗಳ ಮೇಲೆ ನನ್ನ ತಂದೆಯ ಹೆಬ್ಬೆಟ್ಟು ಸಹಿಗಳನ್ನು ಪಡೆದುಕೊಂಡಿದ್ದೇವು ಎಂದರೆ ಸರಿಯಲ್ಲ.

**{ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ಪಿಡಬ್ಲ್ಯೂ: 1**

**ಪಿಡಬ್ಲ್ಯೂ: 1**

**ದಿಃ 13-03-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎಂ ಹೆಚ್ ಜೆ ವಾದಿ ಪರ ವಕೀಲರಿಂದಃ**

ವಾದಿಯು ಈ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾದವು.

| | |
|---|---|
| ನಿ ಪಿ 18 | 25-11-2022 ರಂದು ತಹಶೀಲ್ದಾರವರಿಗೆ ಸಲ್ಲಿಸಿದ ಪತ್ರದ ಪ್ರತಿ. |
| ನಿ ಪಿ 19 | 30-11-2020 ರಂದು ಪಿಡಿಓ ಗ್ರಾಮ ಪಂಚಾಯಿತಿ ಹೀರೆಕೊಗಲೂರು ಇವರಿಗೆ ನೀಡಿದ ಪತ್ರದ ದೃ.ಪ್ರತಿ. |
| ನಿ ಪಿ 20 | 20-02-2022 ರಂದು ತಹಶೀಲ್ದಾರ್ ಕಾರ್ಯಾಲಯ ಚನ್ನಗಿರಿಯವರು ನೀಡಿದ ಹಿಂಬರಹ (18 ಪುಟಗಳು). |

**(ಶ್ರೀ. ಎಂ ಟಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**ಪಿಡಬ್ಲ್ಯೂ: 1**

**ದಿ: 01-12-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಶ್ರೀ. ಎಂ ಟಿ ಎಸ್ 5 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರಿಂದ:**

ನಾನು, ನನ್ನ ಸಹೋದರ ಮತ್ತು ನನ್ನ ತಂದೆ ವಿಭಾಗ ಮಾಡಿಕೊಳ್ಳುವುದಕ್ಕೂ ಮುಂಚೆ ನನ್ನ ತಂದೆಯ ಹೆಸರಿಗಿದ್ದ ಆಸ್ತಿಗಳ ವಿವರ ಹೇಳಲಾಗುವುದಿಲ್ಲ. ನನ್ನ ತಂದೆ ವೀರಪ್ಪರವರಿಗೆ ರುದ್ರಪ್ಪ ಅಂತಾ ಸಹೋದರ ಇದ್ದ ಎಂದರೆ ಸರಿ. ಮುಂಚೆ ನನ್ನ ತಂದೆ ವೀರಪ್ಪ ಮತ್ತು ಅವರ ಸಹೋದರ ರುದ್ರಪ್ಪ ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ಸರಿ. ನನ್ನ ತಂದೆ ವೀರಪ್ಪ ಮತ್ತು ಅವರ ಸಹೋದರ ರುದ್ರಪ್ಪರವರು ಆಸ್ತಿ ವಿಭಾಗ ಮಾಡಿಕೊಂಡಿದ್ದು ಆ ಬಗ್ಗೆ ದಾಖಲೆ ಇದೆ. 7 ನೇ ಪ್ರತಿವಾದಿ ತನ್ನ ಕೌಂಟರ್ ಕ್ಲೇಮ್ ಪ್ರತಿವಾದ ಪತ್ರದಲ್ಲಿ ಕಾಣಿಸಿದ ಎಲ್ಲಾ ಆಸ್ತಿಗಳು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿ. 2008 ರಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಸಹೋದರ ಮಧ್ಯೆ ಅಂತಿಮವಾಗಿ ನ್ಯಾಯಾಲಯದಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ ಆದೇಶ ಆಗಿ ವಿಭಾಗ ಆಗಿತ್ತು. 2005 ರಿಂದ 2008 ರ ಅವಧಿಯಲ್ಲಿ ನನ್ನ ತಂದೆಗೆ ಇದ್ದ ಮೂರು ಜನ ಹೆಣ್ಣು ಮಕ್ಕಳನ್ನು ಸದರಿ ಪ್ರಕರಣದಲ್ಲಿ ಸೇರಿಸಿರಲಿಲ್ಲ. ನನ್ನ ಸಹೋದರಿಯರು ಅವರ ಪಿತ್ರಾರ್ಜಿತ ಆಸ್ತಿಗಳಲ್ಲಿ ತಮ್ಮ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ ಬರೆದುಕೊಟ್ಟಿಲ್ಲ.

ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ಈ ಮುಂಚೆ ನಮ್ಮ ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ತಂದೆ ಮಾಡುತ್ತಿದ್ದರು. ನಾನು ಮತ್ತು ನನ್ನ ಸಹೋದರ ನ್ಯಾಯಾಲಯದಲ್ಲಿ ವಿಭಾಗ ಕೋರಿ ಪ್ರಕರಣ ದಾಖಲಿಸಿದ ನಂತರ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿದ್ದೆವು. ಹಾಗೆ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾಂಭಿಸಿದಾಗ ನನ್ನ ತಂದೆ ಮತ್ತು ನನ್ನ ತಾಯಿ ನನ್ನ ಜತೆ ವಾಸ ಇದ್ದರು ಎಂದರೆ ಸರಿ. ನನ್ನ ತಂದೆಗೆ 2018 ರಲ್ಲಿ ಸುಮಾರು 86 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ ತಂದೆ 2019 ರಲ್ಲಿ ಮರಣ ಹೊಂದಿದ್ದರು ಎಂದರೆ ಸರಿ. ನನ್ನ ತಂದೆ 2019 ರಲ್ಲಿ ಮರಣ ಹೊಂದುವ 15 ವರ್ಷಗಳ ಮುಂಚೆ ಅವರಿಗೆ ಪಾರ್ಶ್ವ ವಾಯು ಖಾಯಿಲೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ಸಹೋದರ 7 ನೇ ಪ್ರತಿವಾದಿ ದಾಖಲಿಸಿದ ಪ್ರಕರಣದಲ್ಲಿ ನಾನು ಒಬ್ಬನೇ ನ್ಯಾಯಾಲಯದಲ್ಲಿ ಓಡಾಡುತ್ತಿದ್ದೆ ಎಂದರೆ ಸರಿ. 2008 ರಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ

ಕೊನೆಯದಾಗಿ ನ್ಯಾಯಾಲಯದಲ್ಲಿ ಅಂತಿಮ ಡಿಕ್ರಿ ಆದೇಶ ಆದ ದಿನ ನಾನು ಮತ್ತು 7 ನೇ ಪ್ರತಿವಾದಿ ನಮ್ಮ ತಂದೆಯನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೇವು ಎಂದರೆ ಸರಿ. 2008 ರಲ್ಲಿ ನನ್ನ ತಂದೆ ಸ್ವತಂತ್ರವಾಗಿ ನ್ಯಾಯಾಲಯಕ್ಕೆ ಬರಲು ಆಗದೇ ಇದ್ದ ಕಾರಣ ನಾನು ಮತ್ತು ನನ್ನ ಸಹೋದರ 7 ನೇ ಪ್ರತಿವಾದಿ ಸೇರಿ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದೆವು ಎಂದರೆ ಸರಿಯಲ್ಲ. 2008 ರಲ್ಲಿ ನನ್ನ ತಂದೆ ಪಾರ್ಶ್ವ ವಾಯು ಖಾಯಿಲೆಯಿಂದ ತುಂಬಾ ಬಳಲಿದ್ದರು ಎಂದರೆ ಸರಿಯಲ್ಲ. 2008 ರ ನಂತರ ನನ್ನ ತಂದೆ ನಮ್ಮೊಂದಿಗೆ ಇದ್ದ ಕಾಲದಲ್ಲಿ ನಮ್ಮ ಕುಟುಂಬದ ಯಜಮಾನಿಕೆಯನ್ನು ನಾನೇ ಮಾಡುತ್ತಿದ್ದೆ ಎಂದರೆ ಸರಿ.

2008 ರಲ್ಲಿ ಎಫ್ ಡಿ ಪಿ ಪ್ರಕರಣದಲ್ಲಿ ಆದ ಅಂತಿಮ ಡಿಕ್ರಿ ಆದೇಶದಲ್ಲಿ ಈ ಪ್ರಕರಣದಲ್ಲಿ ಕಾಣಿಸಿದ ಎಲ್ಲಾ ದಾವ ಆಸ್ತಿಗಳು ಮತ್ತು 7 ನೇ ಪ್ರತಿವಾದಿ ತನ್ನ ಕೌಂಟರ್ ಕ್ಲೇಮ್ ನಲ್ಲಿ ಕಾಣಿಸಿದ ಆಸ್ತಿಗಳು ನನ್ನ ತಂದೆಯ ಭಾಗಕ್ಕೆ ಬಂದಿದ್ದವು ಎಂದರೆ ಸರಿ. 2008 ರಲ್ಲಿ ನನ್ನ ತಂದೆಗೆ ಬಂದ ಆಸ್ತಿಗಳೆಲ್ಲವನ್ನು ನನ್ನ ತಂದೆ ನನ್ನೊಂದಿಗೆ ವಾಸ ಇದ್ದ ಕಾರಣ ನಾನೇ ಸಾಗುವಳಿ ಮಾಡುತ್ತಿದ್ದೆ ಎಂದರೆ ಸರಿ. ವಿಭಾಗ ಆದ ನಂತರ ನನ್ನ ತಂದೆಯ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರ ಹೆಸರಿಗೆ ದಾಖಲೆ ಬದಲಾವಣೆ ಮಾಡಲು ನಾನೇ ಓಡಾಡಿದ್ದೆ ಎಂದರೆ ಸರಿ. ನನ್ನ ತಂದೆ ತಾಯಿ ಅವರ ಹೆಣ್ಣು ಮಕ್ಕಳ ಮೇಲೆ ಯಾವುದೇ ದ್ವೇಷ ಮತ್ತು ಹೆಚ್ಚು ಕಡಿಮೆ ಭಾವನೆ ಇದ್ದಿರಲಿಲ್ಲ. ನನ್ನ ತಂದೆ ಅವರ ಮೊಮ್ಮಕ್ಕಳ ಮೇಲೆ ಸಮಾನ ಭಾವನೆ ಹೊಂದಿದ್ದರು ಎಂದರೆ ಸರಿ. ಎಫ್ ಡಿ ಪಿ ಪ್ರಕರಣದಲ್ಲಿ ನನ್ನ ತಂದೆ ಅವರ ಭಾಗಕ್ಕೆ ಬಂದ ಆಸ್ತಿಗಳ ವಿಷಯವನ್ನು ನನ್ನ ಸಹೋದರಿಯರಿಗೆ ನನ್ನ ತಂದೆಯೇ ತಿಳಿಸಿದ್ದರು. 2018 ರಲ್ಲಿ ನನ್ನ ತಂದೆಗೆ 95 ವರ್ಷ ವಯಸ್ಸು ಆಗಿದ್ದ ಕಾರಣ ಯಾವುದೇ ಕಛೇರಿಗೆ ಓಡಾಡುವ ದೈಹಿಕ ಸಾಮರ್ಥ್ಯ ಹೊಂದಿರಲಿಲ್ಲ ಎಂದರೆ ಸರಿಯಲ್ಲ. 2008 ರ ನಂತರ ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಅವರ ಮಾನಸಿಕ ಸ್ಥಿತಿ ಸಮರ್ಪಕ ಆಗಿರಲಿಲ್ಲ ಎಂದರೆ ಸರಿಯಲ್ಲ.

7 ನೇ ಪ್ರತಿವಾದಿ ಭಾಗ ಕೋರಿ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿದ ನಂತರ ನನ್ನ ಮತ್ತು 7 ನೇ ಪ್ರತಿವಾದಿಯ ಬಾಂಧವ್ಯ ಸರಿ ಇರಲಿಲ್ಲ ಮತ್ತು ಪರಸ್ಪರ ಮಾತನಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ 7 ನೇ ಪ್ರತಿವಾದಿಯ ಮೇಲೆ

ಯಾವುದೇ ದ್ವೇಷ ಮತ್ತು ಅಸಮಾಧಾನ ಇದ್ದಿರಲಿಲ್ಲ ಎಂದರೆ ಸರಿ. ನನ್ನ ತಂದೆ 5 ನೇಪ್ರತಿವಾದಿಯನ್ನು ಆದರದಿಂದ ಮತ್ತು ಪ್ರೀತಿಯಿಂದ ಕಾಣುತ್ತಿದ್ದರು ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

# OS 07/2021

**<u>ಪಿಡಬ್ಲ್ಯೂ: 1</u>**

**<u>ದಿಃ 22-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಶ್ರೀ. ಎಂ ಹೆಚ್ ಜೆ ವಾದಿ ಪರ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ವಾದಿಯು ಈ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾದವು.

| | |
|---|---|
| ನಿ ಪಿ 1 | ಎ.ವೀರಪ್ಪ ರವರ ಮರಣ ಪ್ರಮಾಣ ಪತ್ರ. |
| ನಿ ಪಿ 2 | ವಂಶವೃಕ್ಷದ ದೃ.ಪತ್ರ. |
| ನಿ ಪಿ 3 | ವಂಶವೃಕ್ಷದ ಪ್ರಮಾಣ ಪತ್ರ. |
| ನಿ ಪಿ 4 | ಅಸಲು ದಾವ ನಂ. 365/2001 ರ ಡಿಕ್ರಿಯ ದೃ.ಪ್ರತಿ. |
| ನಿ ಪಿ 5 | ಎಫ್.ಡಿ.ಪಿ.10/2005 ರ ಪ್ರಕರಣದಲ್ಲಿ ಸಲ್ಲಿಸಿದ ರಾಜಿ ಅರ್ಜಿಯ ದೃ.ಪ್ರತಿ. |
| ನಿ ಪಿ 6 | ಎಫ್.ಡಿ.ಪಿ.10/2005 ರ ಪ್ರಕರಣದ ಅಂತಿಮ ಡಿಕ್ರಿ ದಾಖಲೆ. |
| ನಿ ಪಿ 7 | ಸ.ನಂ.200/4 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 8 | ಸ.ನಂ.86/13 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 9 | ಸ.ನಂ.86/16 ಆಸ್ತಿಯ ಪಹಣಿ ಪತ್ರಿಕೆ. |
| ನಿ ಪಿ 10 | ಆಸ್ತಿ ಖಾತೆ ನಂ.217 ಖಾತೆಯ ಡಿಸಿಬಿ ರಿಜಿಸ್ಟರ್ ದಾಖಲೆ. |
| ನಿ ಪಿ 11 | ಎಂ.ಆರ್.ನಂ.7/18-19 ರ ದಾಖಲೆಯ ದೃ.ಪ್ರತಿ. |
| ನಿ ಪಿ 12 | ದಿಃ 29/08/2019 ರಂದು ಗ್ರಾಮ ಲೆಕ್ಕಾಧಿಕಾರಿ ಸ್ವೀಕೃತ ಅರ್ಜಿ. |
| ನಿ ಪಿ 13 | ದಿಃ 07/12/2020 ರಂದು ಗ್ರಾಮ ಲೆಕ್ಕಾಧಿಕಾರಿ ಸ್ವೀಕೃತ ಅರ್ಜಿ. |
| ನಿ ಪಿ 14 | ದಿಃ 07/12/2020 ರಂದು ಗ್ರಾಮ ಪಂಚಾಯಿತಿ ಕೋಗಲೂರು ರವರು ನೀಡಿದ ಹಿಂಬರಹ. |
| ನಿ ಪಿ 15 | ವಾದಿಯ ಆಧಾರ್ ಕಾರ್ಡ್‌ನ ನೋಟರಿ ಪ್ರತಿ. |
| ನಿ ಪಿ 16 | ಸಾಕ್ಷಿಗೆ ಪ್ರಕರಣ ನಡೆಸಲು ನೀಡಿದ ಜಿ ಪಿ ಎ ದಾಖಲೆ. |
| ನಿ ಪಿ 17 | ಸಾಕ್ಷಿಯ ಆಧಾರ್ ಕಾರ್ಡ್. |

**(ಶ್ರೀ. ಎಂ ಟಿ ಎಸ್ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.